ದಿನಾಂಕ 19-11-2019 ರಂದು ಮಧ್ಯಾಹ್ನ 12.00 ಗಂಟೆಗೆ ಕೊಠಡಿ ಸಂ. 252, ಬಹುಮಹಡಿಗಳ ಕಟ್ಟಡ, ಬೆಂಗಳೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 42ನೇ ಸಭೆಯ ನಡುವಳಿಗಳು:

ಉಪಸ್ಥಿತರು:

| | | |
|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಭಾಆಸೇ., ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ, | ಸದಸ್ಯರು |
| 3. | ಶ್ರೀಮತಿ ಪದ್ಮಾವತಿ, ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಪರವಾಗಿ) | ಸದಸ್ಯರು |
| 4. | ಡಾ. ಶಿವರಾಜ ಪಾಟೀಲ್, ವಿಧಾನ ಸಭಾ ಸದಸ್ಯರು, ರಾಯಚೂರು | ಸದಸ್ಯರು |
| 5. | ಶ್ರೀ ಅಮರೇಶ ಬಲ್ಲಿದವ, ದೇವದುರ್ಗ, ರಾಯಚೂರು ಜಿಲ್ಲೆ | ಸದಸ್ಯರು |
| 6. | ಶ್ರೀ ಸಿದ್ದಪ್ಪ ಭಂಡಾರಿ, ಕಲಮಲ, ರಾಯಚೂರು ಜಿಲ್ಲೆ | ಸದಸ್ಯರು |
| 7. | ಶ್ರೀ ವೀರನಗೌಡ ಪರಸರೆಡ್ಡಿ, ನಾಲವಾರ, ಚಿತ್ತಾಪುರ, ಕಲಬುರಗಿ ಜಿಲ್ಲೆ | ಸದಸ್ಯರು |
| 8. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ-ಕಾರ್ಯದರ್ಶಿ |

ಪ್ರಾರಂಭದಲ್ಲಿ, ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಹಾಗೂ ಶ್ರೀ ರಾಜೇಂದರ್ ಕುಮಾರ್ ಕಟಾರಿಯಾ ಸರಕಾರದ ಕಾರ್ಯದರ್ಶಿಗಳು (ಕೃಷಿ) ಇವರಿಗೆ ಮಾನ್ಯ ಕುಲಪತಿಗಳು ಹಾಗೂ ಸಭಾಧ್ಯಕ್ಷರು ಹೂ-ಗುಚ್ಛ ನೀಡುವುದರೊಂದಿಗೆ ಸ್ವಾಗತ ಕೋರಿದರು ಹಾಗೂ ಹಾಜರಿದ್ದ ಎಲ್ಲಾ ಸದಸ್ಯರನ್ನು ಸ್ವಾಗತಿಸಿದರು.

ತದನಂತರ, ಕೋರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ-ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸಭಾಧ್ಯಕ್ಷರು ಸೂಚಿಸಿದರು. ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ-1 | ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 41ನೇ ಸಭೆಯ ನಡುವಳಿಗಳನ್ನು ಸ್ಥಿರೀಕರಿಸುವುದು<br><br>ಠರಾವು:<br>ದಿನಾಂಕ 17-8-2019, ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 41ನೇ ಸಭೆಯ ನಡುವಳಿಗಳನ್ನು ಸ್ಥಿರೀಕರಿಸಲಾಯಿತು.<br>(ಕ್ರಮ : ಕುಲಸಚಿವರು) |
| ಐಟಂ-2 | ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 41ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.<br><br>ಠರಾವು:<br>ದಿನಾಂಕ 17-8-2019, ರಂದು ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 41ನೇ ಸಭೆಯ ನಡುವಳಿಗಳ ಮೇಲೆ ತೆಗೆದುಕೊಳ್ಳಲಾದ ಅನುಪಾಲನಾ ಕ್ರಮಗಳನ್ನು ಸ್ಥಿರೀಕರಿಸಲಾಯಿತು.<br><br>ಆದಗ್ಯೂ, ಐಟಂ ಸಂಖ್ಯೆ 4ಕ್ಕೆ ಸಂಬಂಧಿಸಿದಂತೆ ಡಾ. ಎಂ.ಎನ್. ಶೀಲವಂತರ್ ಸಮಿತಿಯ ವರದಿಯನ್ವಯ ಆದಷ್ಟು ಬೇಗನೆ ಸಂಬಂಧಪಟ್ಟ ಆಗಿನ ನೇಮಕಾತಿ ಸಮಿತಿಯ ಅಧ್ಯಕ್ಷರನ್ನೊಳಗೊಂಡ ಇತರೆ ಸದಸ್ಯರುಗಳ ವಿವರಣೆ ಪಡೆಯಲಾದ ವರದಿಯನ್ನು ಕೂಡಲೇ ಸರ್ಕಾರಕ್ಕೆ ಸಲ್ಲಿಸುವಂತೆ ಮಂಡಳಿಯು ಸಲಹೆ ನೀಡಿತು.<br><br>(ಕ್ರಮ : ಕುಲಸಚಿವರು) |

| | |
|---|---|
| ಐಟಂ–3 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 11ನೆಯ ಸಂಸ್ಥಾಪನಾ ದಿನಾಚರಣೆಯಂದು ಬಹುಮಾನ/ಪ್ರೋತ್ಸಾಹಧನ ನೀಡಲು ಅನುಮೋದನೆ ಕುರಿತು.<br><br>ಠರಾವು:<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ದಿನಾಂಕ 22–11–2019 ರಂದು ಜರುಗುವ 11ನೆಯ ಸಂಸ್ಥಾಪನಾ ದಿನಾಚರಣೆಯಂದು ಅತ್ಯುತ್ತಮ ಬೋಧಕ / ವಿಜ್ಞಾನಿಗಳು ಮತ್ತು ಸೇವಾ ಸಿಬ್ಬಂದಿ / ಅಭಿನವ ಕೃಷಿಕ ಪ್ರಶಸ್ತಿ ಪತ್ರ ಮತ್ತು ರಾಷ್ಟ್ರ ಪ್ರಶಸ್ತಿ ವಿಜೇತ ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಚಿನ್ನದ ಪದಕ ಪ್ರಶಸ್ತಿಗಳನ್ನು ಹಾಗೂ ಸಂಶೋಧನಾ ಯೋಜನೆಗಳನ್ನು ಪಡೆಯುವ ವಿಜ್ಞಾನಿಗಳಿಗೆ ಪ್ರೋತ್ಸಾಹ ಧನ ಪಡೆಯುವವರ ಯಾದಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು) |
| ಐಟಂ–4 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಶ್ರೇಷ್ಠ ಕೃಷಿ ಉದ್ಯಮಿ ಪ್ರಶಸ್ತಿಯನ್ನು ಸ್ಥಾಪಿಸುವುದರ ಕುರಿತು.<br><br>ಠರಾವು:<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕಲ್ಯಾಣ–ಕರ್ನಾಟಕ ಕೃಷಿ ಉದ್ಯಮಿಗಳಿಗೆ ಶ್ರೇಷ್ಠ ಕೃಷಿ ಉದ್ಯಮಿ ಪ್ರಶಸ್ತಿಯನ್ನು 2020–21 ರಿಂದ ಸ್ಥಾಪಿಸಲು ಮತ್ತು ಪ್ರತಿವರ್ಷ ಅದರ ಸಂಸ್ಥಾಪನಾ ದಿನದಂದು ಪ್ರಶಸ್ತಿ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು) |
| ಐಟಂ–5 | ಕೃವಿವಿ ರಾಯಚೂರಿನ ಮುಖ್ಯ ಆವರಣದಲ್ಲಿ ಕೃಷಿಮೇಳ ಏರ್ಪಡಿಸುವ ಕುರಿತು.<br>ಠರಾವು:<br>ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಕೃಷಿ ಮೇಳವನ್ನು ಏರ್ಪಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು / ವಿಸ್ತರಣಾ ನಿರ್ದೇಶಕರು) |
| ಐಟಂ–6 | ಕೃಷಿಮೇಳದ ಅಂಗವಾಗಿ ಶ್ರೀ ನಾಗಭೂಷಣ ಘನಮಠ ಶಿವಯೋಗಿಗಳು, ಸಂತೇಕಲ್ಲೂರು, ಜಿಲ್ಲಾ: ರಾಯಚೂರು – ಉತ್ತಮ ಕನ್ನಡ ಕೃಷಿ ಲೇಖನ ಪ್ರಶಸ್ತಿ ಸ್ಥಾಪಿಸಲು ಅನುಮೋದನೆ.<br><br>ಠರಾವು:<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ನವೆಂಬರ್ 1 ರಿಂದ ಅಕ್ಟೋಬರ್ 31 ರವರೆಗೆ ಕೃಷಿ ನಿಯತಕಾಲಿಕೆಗಳಲ್ಲಿ (ಎಸ್.ಎ.ಯು ಮತ್ತು ಇತರ ಏಜೆನ್ಸಿಗಳ) ಮತ್ತು ದಿನಪತ್ರಿಕೆಗಳಲ್ಲಿ (ವಿಶೇಷ ಸಂಚಿಕೆ, ಸಾಪ್ತಾಹಿಕ ಪೂರಕ) ಪ್ರಕಟವಾದ ಆಯ್ದ ಉತ್ತಮ ಕನ್ನಡ ಲೇಖನಗಳಿಗೆ "ಶ್ರೀ ನಾಗಭೂಷನ ಘನಮಠ ಶಿವಯೋಗಿ, ಸಂತೇಕಲ್ಲೂರು" ಇವರ ಹೆಸರಿನಲ್ಲಿ "ಉತ್ತಮ ಕನ್ನಡ ಲೇಖನ" ಪ್ರಶಸ್ತಿಯನ್ನು 2020–21 ರಿಂದ ಸ್ಥಾಪಿಸಿ, ರೂ. 10,000/– ಗಳ ನಗದು ಮತ್ತು ಪ್ರಶಸ್ತಿ ಪತ್ರವನ್ನು ವಿಶ್ವವಿದ್ಯಾಲಯದ ಕೃಷಿ ಮೇಳದ ಸಂದರ್ಭದಲ್ಲಿ ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ: ಕುಲಸಚಿವರು / ವಿಸ್ತರಣಾ ನಿರ್ದೇಶಕರು) |
| ಐಟಂ–7 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2018–19ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ಕುರಿತು.<br><br>ಠರಾವು:<br>ಚರ್ಚೆಯ ನಂತರ, ಹಣಕಾಸು ಸಮಿತಿಯ ಶಿಫಾರಸ್ಸಿನಂತೆ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2018–19 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. |

| | |
|---|---|
| | ಮುಂದುವರೆದು, ಶ್ರೀಮತಿ ಪದ್ಮಾವತಿ, ಹೆಚ್ಚುವರಿ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ವಿಶ್ವವಿದ್ಯಾಲಯದ ಹಣಕಾಸಿನ ಸ್ಥಿತಿಗತಿಯ ಕುರಿತು ಪ್ರತಿ ಹಣಕಾಸು ಸಮಿತಿ ಸಭೆಯಲ್ಲಿ ಚರ್ಚಿಸಲು ಸಲಹೆ ನೀಡಿದರು ಮತ್ತು ಹೆಚ್ಚುವರಿ ಅನುದಾನ ಬೇಕಾದಲ್ಲಿ, ಮುಂಚಿತವಾಗಿ ಹಣಕಾಸು ವಿಭಾಗಕ್ಕೆ ತಿಳಿಸಲು ಸಲಹೆ ನೀಡಿದರು.<br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು) |
| ಐಟಂ–8 | ಸಹಾಯಕ ಪ್ರಾಧ್ಯಾಪಕ (ಸಸ್ಯರೋಗ ಶಾಸ್ತ್ರ) ಹುದ್ದೆಯ ನೇಮಕಾತಿಗೆ ಅನುಮೋದನೆ ಕುರಿತು<br><br>ಪ್ರಥಮವಾಗಿ ಪರಿಶಿಷ್ಟ ಜಾತಿ (ಸಾಮಾನ್ಯ) ಪ್ರವರ್ಗದಡಿ ಸಹಾಯಕ ಪ್ರಾಧ್ಯಾಪಕ (ಸಸ್ಯರೋಗ ಶಾಸ್ತ್ರ) ಹುದ್ದೆಯ ನೇಮಕಾತಿಗಾಗಿ ನೇಮಕಾತಿಯ ಆಯ್ಕೆ ಸಮಿತಿಯು ಶ್ರೀಮತಿ ಪೂರ್ಣಿಮಾ ಇವರನ್ನು ಪ್ರಥಮ ಸ್ಥಾನದಲ್ಲಿ, ಶ್ರೀ ಹನುಮಂತ ಇವರನ್ನು ದ್ವಿತೀಯ ಸ್ಥಾನದಲ್ಲಿ ಹಾಗೂ ಶ್ರೀ ರಾಜಾ ಇವರನ್ನು ತೃತೀಯ ಸ್ಥಾನದಲ್ಲಿ ಇರಿಸಿ ಆಯ್ಕೆ ಪಟ್ಟಿ ತಯಾರಿಸಿರುತ್ತದೆ. ಪ್ರಥಮ ಸ್ಥಾನದಲ್ಲಿದ್ದ ಶ್ರೀಮತಿ ಪೂರ್ಣಿಮಾ ಇವರು ಸಾಮಾನ್ಯ ವರ್ಗದಡಿಯಲ್ಲಿ ಸಹ ಆಯ್ಕೆಯಾಗಿ ಕರ್ತವ್ಯಕ್ಕೆ ಹಾಜರಾಗಿದ್ದರಿಂದ ಪರಿಶಿಷ್ಟ ಜಾತಿ (ಸಾಮಾನ್ಯ) ಪ್ರವರ್ಗದಡಿ ದ್ವಿತೀಯ ಸ್ಥಾನದಲ್ಲಿದ್ದ ಶ್ರೀ ಹನುಮಂತ ಇವರಿಗೆ ಸದರಿ ಹುದ್ದೆಗೆ ನೇಮಕಾತಿ ಆದೇಶ ನೀಡಲಾಗಿತ್ತು.<br><br>ನೇಮಕಾತಿಯ ಸಂಬಂಧ ದೂರುಗಳ ಪರಿಶೀಲನೆಯನ್ನು ಕೈಗೊಂಡ ಡಾ. ಎಂ.ಎನ್. ಶೀಲವಂತರ್ ಸಮಿತಿಯು ಶ್ರೀಮತಿ ಪೂರ್ಣಿಮಾ ಇವರನ್ನು ಪ್ರಥಮ ಸ್ಥಾನದಲ್ಲಿ, ಶ್ರೀ ರಾಜಾ ಇವರನ್ನು ದ್ವಿತೀಯ ಸ್ಥಾನದಲ್ಲಿ ಹಾಗೂ ಶ್ರೀ ಹನುಮಂತ ಇವರನ್ನು ತೃತೀಯ ಸ್ಥಾನದಲ್ಲಿ ಇರಿಸಿ ಆಯ್ಕೆ ಪಟ್ಟಿಯನ್ನು ಪರಿಷ್ಕರಿಸಲು ಶಿಫಾರಸ್ಸು ಮಾಡಿರುತ್ತದೆ. ಅಲ್ಲದೆ, ಶ್ರೀಮತಿ ಪೂರ್ಣಿಮಾ ಇವರನ್ನು ಸಾಮಾನ್ಯ ಪ್ರವರ್ಗದಲ್ಲಿ ಆಯ್ಕೆ ಆಗಿರುವುದರಿಂದ ಪರಿಶಿಷ್ಟ ಜಾತಿ (ಸಾಮಾನ್ಯ) ಪ್ರವರ್ಗದಡಿ ಶ್ರೀ ರಾಜಾ ಇವರನ್ನು ಪ್ರಥಮ ಸ್ಥಾನದಲ್ಲಿ ಇರಿಸಿ ಆಯ್ಕೆ ಪಟ್ಟಿ ತಯಾರಿಸಬೇಕಾಗಿರುತ್ತದೆಯೆಂದು ಸಮಿತಿಯು ಸೂಚಿಸಿರುತ್ತದೆ.<br><br>ಇದಲ್ಲದೇ ಶ್ರೀ ರಾಜಾ ಇವರು ಮಾನ್ಯ ಉಚ್ಚ ನ್ಯಾಯಾಲಯ ಕಲಬುರಗಿ ಪೀಠದಲ್ಲಿ ಸಲ್ಲಿಸಿದ ರಿಟ್ ಅರ್ಜಿ ಸಂ. 208475/2017 ರ ಆದೇಶದಂತೆ ಶ್ರೀ ರಾಜಾ ಅವರ ದಿನಾಂಕ 12–12–2017 ರ ವಿನಂತಿ ಅರ್ಜಿಯನ್ನು ಪರಿಶೀಲಿಸಲು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ದಿನಾಂಕ 18–9–2019 ರಂದು ಸಭೆ ಸೇರಿ ಕೃವಿವಿ ವಕೀಲರ ಸಲಹೆಯಂತೆ ಶ್ರೀ ರಾಜಾ ಹಾಗೂ ಶ್ರೀ ಹನುಮಂತ ಇವರುಗಳಿಗೆ ಅವಕಾಶ ನೀಡಿ, ದಾಖಲೆಗಳನ್ನು ಹಾಗೂ ಪ್ರಕಟಣೆಗಳನ್ನು ಪರಿಶೀಲಿಸಿ, ಸಮಿತಿಯು ಸಲ್ಲಿಸಿದ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಭೆಯಲ್ಲಿ ಮಂಡಿಸಿದ್ದನ್ನು ವ್ಯವಸ್ಥಾಪನಾ ಮಂಡಳಿಯು ಕೂಲಂಕಷವಾಗಿ ಪರಿಶೀಲಿಸಿತು.<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಶ್ರೀ ರಾಜಾ ಇವರಿಗೆ ಪರಿಶಿಷ್ಟ ಜಾತಿ (ಸಾಮಾನ್ಯ) ಪ್ರವರ್ಗದಡಿ ಸಹಾಯಕ ಪ್ರಾಧ್ಯಾಪಕ (ಸಸ್ಯರೋಗ ಶಾಸ್ತ್ರ) ಹುದ್ದೆಯ ನೇಮಕಾತಿಗಾಗಿ ಶಿಫಾರಸ್ಸು ಮಾಡುತ್ತಾ, ಶ್ರೀ ಹನುಮಂತ ಇವರ ನೇಮಕಾತಿ ಆದೇಶವನ್ನು ವಿಶ್ವವಿದ್ಯಾಲಯದ ನಿಯಮಾನುಸಾರ ಹಿಂಪಡೆಯಲು ಅನುಮೋದನೆ ನೀಡಿತು.<br><br>ಡಾ. ಎಂ.ಎನ್. ಶೀಲವಂತರ್ ಸಮಿತಿಯ ಶಿಫಾರಸ್ಸಿನಂತೆ ಆಗಿನ ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರುಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲು ಮಂಡಳಿಯು ಸಲಹೆ ನೀಡಿತು.<br>(ಕ್ರಮ : ಕುಲಸಚಿವರು) |
| ಐಟಂ–9 | ಬೀಜೋತ್ಪಾದನಾ ಕೇಂದ್ರ, ಚಿತ್ತಾಪುರ ಕೃಷಿ ಕ್ಷೇತ್ರವನ್ನು ಕೃವಿವಿ., ರಾಯಚೂರಿಗೆ ಹಸ್ತಾಂತರಿಸಲಾದ ಲೀಸ್ ಅವಧಿಯನ್ನು ವಿಸ್ತರಿಸಲು ಅನುಮೋದನೆ ಕುರಿತು<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ವ್ಯಾಪ್ತಿಯ ರೈತಾಪಿ |

| | |
|---|---|
| | ವರ್ಗದವರ ಹಿತದೃಷ್ಟಿಯಿಂದ ಹಾಗೂ ಸಂಪೂರ್ಣ ಯಾಂತ್ರೀಕೃತ ಫಾರ್ಮ್ ಸ್ಥಾಪಿಸಿ ಬಳಕೆ ಮಾಡಿಕೊಳ್ಳಲು ಬೀಜೋತ್ಪಾದನಾ ಕೇಂದ್ರ, ಚಿತ್ತಾಪೂರ ಕ್ಷೇತ್ರವನ್ನು ಇನ್ನೂ 33 ವರ್ಷಗಳ ವರೆಗೆ ಹಸ್ತಾಂತರಣದ (ಲೀಸ್) ಅವಧಿಯನ್ನು ವಿಸ್ತರಿಸುವುದು ಅತ್ಯಂತ ಅವಶ್ಯಕವಾಗಿರುತ್ತದೆ ಎಂಬ ಅಂಶದೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು / ಸಂಶೋಧನಾ ನಿರ್ದೇಶಕರು) |
| ಐಟಂ–10 | **ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಯವರಿಗೆ ಪಿ.ಹೆಚ್.ಡಿ. ವಿದ್ಯಾರ್ಹತೆಗಾಗಿ 1996 ಮತ್ತು 2006ರ ಯು.ಜಿ.ಸಿ. / ಐ.ಸಿ.ಆರ್. ವೇತನ ಶ್ರೇಣಿ ಅನುಸಾರ ಮುಂಗಡ ವೇತನ ಬಡ್ತಿಗಳನ್ನು ಪರಿಷ್ಕರಿಸಲು ಅನುಮೋದನೆ ಕುರಿತು.**<br><br>ಕೃವಿವಿ., ರಾಯಚೂರಿನಲ್ಲಿ 1996ರ ವೇತನ ಶ್ರೇಣಿಯನ್ವಯ ದಿನಾಂಕ: 1–1–1996 ರಿಂದ 14–1–2000ರ ಅವಧಿಯಲ್ಲಿ ಪಿ.ಹೆಚ್.ಡಿ. ಯೊಂದಿಗೆ ನಿಯುಕ್ತಿ ಹೊಂದಿದ ಬೋಧಕ ಸಿಬ್ಬಂದಿಯವರಿಗೆ ನಾಲ್ಕು ಮುಂಗಡ ವೇತನ ಹಾಗೂ ಕಾರ್ಯನಿರತ ಬೋಧಕರಿಗೆ ಪಿ.ಹೆಚ್.ಡಿ. ಹೊಂದಿದಲ್ಲಿ ಎರಡು ಮುಂಗಡ ವೇತನವನ್ನು ನೀಡಲು ಕರ್ನಾಟಕ ಸರಕಾರದ ಆದೇಶ ಸಂ. AHD 25 AUM 99 ದಿನಾಂಕ 14–01–2000ರಲ್ಲಿ ಅವಕಾಶ ಕಲ್ಪಿಸಿರುತ್ತದೆ ಹಾಗೂ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ 2006ರ ವೇತನ ಶ್ರೇಣಿಯನ್ವಯ ದಿನಾಂಕ: 1–1–2006 ರಿಂದ 24–3–2010ರ ಅವಧಿಯಲ್ಲಿ ಪಿ.ಹೆಚ್.ಡಿ. ಯೊಂದಿಗೆ ನಿಯುಕ್ತಿ ಹೊಂದಿದ ಬೋಧಕ ಸಿಬ್ಬಂದಿಯವರಿಗೆ ಐದು ಮುಂಗಡ ವೇತನ ಹಾಗೂ ಕಾರ್ಯನಿರತ ಭೋದಕರು ಪಿ.ಹೆಚ್.ಡಿ. ಹೊಂದಿದಲ್ಲಿ ಮೂರು ಮುಂಗಡ ವೇತನವನ್ನು ಸಂಚಿತವಾಗಿ ನೀಡಲಾಗಿರುವ ಬಗ್ಗೆ ಹಾಗೂ ಸರಕಾರದ ಪತ್ರ ಸಂ. ಕೃಇ 86 ಕೃವಿಬೆ 2014 ದಿನಾಂಕ: 28–05–2019ರನ್ವಯ ಸದರಿ ಮುಂಗಡ ವೇತನ ಬಡ್ತಿಗಳನ್ನು ಪರಿಷ್ಕರಿಸುವ ಬಗ್ಗೆ ಸಭೆಯ ಗಮನಕ್ಕೆ ತರಲಾಯಿತು.<br><br>**ಠರಾವು:**<br>ಚರ್ಚೆಯ ನಂತರ, ಸರಕಾರದ ಪತ್ರ ಸಂ. ಕೃಇ 86 ಕೃವಿಬೆ 2014 ದಿನಾಂಕ: 28–05–2019ರನ್ವಯ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳಲ್ಲಿ 1996 ರನ್ವಯ ದಿನಾಂಕ: 1–1–1996 ರಿಂದ 14–1–2000ರ ಅವಧಿಯಲ್ಲಿ ಪಿ.ಹೆಚ್.ಡಿ. ಯೊಂದಿಗೆ ನಿಯುಕ್ತಿ ಹೊಂದಿದ ಬೋಧಕ ಸಿಬ್ಬಂದಿಯವರಿಗೆ ನಾಲ್ಕು ಮುಂಗಡ ವೇತನ ಹಾಗೂ ಕಾರ್ಯನಿರತ ಬೋಧಕರಿಗೆ ಪಿ.ಹೆಚ್.ಡಿ. ಹೊಂದಿದಲ್ಲಿ ಎರಡು ಮುಂಗಡ ವೇತನವನ್ನು ನೀಡಲು ಹಾಗೂ 2006ರ ವೇತನ ಶ್ರೇಣಿಯನ್ವಯ ದಿನಾಂಕ 1–1–2006 ರಿಂದ 24–3–2010 ರ ಅವಧಿಯಲ್ಲಿ ಪಿ.ಹೆಚ್.ಡಿ. ಯೊಂದಿಗೆ ನಿಯುಕ್ತಿ ಹೊಂದಿದ ಭೋದಕ ಸಿಬ್ಬಂದಿಯವರಿಗೆ ಐದು ಮುಂಗಡ ವೇತನವನ್ನು ಸಂಚಿತವಾಗಿ ಹಾಗೂ ಕಾರ್ಯನಿರತ ಭೋದಕರು ಪಿ.ಹೆಚ್.ಡಿ. ಹೊಂದಿದಲ್ಲಿ ಮೂರು ಮುಂಗಡ ವೇತನವನ್ನು ಸಂಚಿತವಾಗಿ ನೀಡುವುದನ್ನು ಪರಿಶೀಲಿಸಿ ಅಂತಹ ಪ್ರಕರಣಗಳಲ್ಲಿ ಮುಂಗಡ ವೇತನ ಬಡ್ತಿಗಳನ್ನು ಪರಿಷ್ಕರಿಸಿ, ಮರು ನಿಗದಿಪಡಿಸಲು ಹಾಗೂ ಯು.ಜಿ.ಸಿ.ಯ ಪತ್ರ ಸಂ. F.No.1-2/2009(EC/PS)/Pt.VII ದಿನಾಂಕ 10–06–2013 ರಲ್ಲಿ ಸ್ಪಷ್ಟೀಕರಿಸಿದಂತೆ ಕ್ರಮವಿಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಆಡಳಿತಾಧಿಕಾರಿಗಳು) |
| ಐಟಂ–11 | **ಎಸ್.ಆರ್.ಎಫ್./ಜೆ.ಆರ್.ಎಫ್ ಇವರಿಗೆ ಐ.ಸಿ.ಎ.ಆರ್. ಮಾರ್ಗಸೂಚಿಯನ್ವಯ ವೇತನವನ್ನು ಹೆಚ್ಚಿಸಲು ಅನುಮೋದನೆ ಕುರಿತು**<br><br>**ಠರಾವು:**<br>ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ವಿವಿಧ ಯೋಜನೆಗಳಲ್ಲಿ ಕಾರ್ಯನಿರತ ಆರ್.ಎ. / ಎಸ್.ಆರ್.ಎಫ್. / ಜೆ.ಆರ್.ಎಫ್. ಅವರುಗಳಿಗೆ ಐ.ಸಿ.ಎ.ಆರ್. ಜ್ಞಾಪನಾ ಪತ್ರ ಸಂ. F.No.Ag.Edn.6/27/2014-HRD ದಿನಾಂಕ 30–7–2019 ರನ್ವಯ ಪರಿಷ್ಕೃತ ವೇತನವನ್ನು ಅಳವಡಿಸಿಕೊಂಡು, ದಿನಾಂಕ 1–1–2019 ರಿಂದ ಜಾರಿಗೆ ಬರುವಂತೆ ವಿಸ್ತರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ಮುಂದುವರೆದು, ಪರಿಷ್ಕೃತ ವೇತನದ ಹೆಚ್ಚುವರಿ ಮೊತ್ತವನ್ನು |

ನೀಡುವಲ್ಲಿ ವಿಶ್ವವಿದ್ಯಾಲಯಕ್ಕೆ ಯಾವುದೇ ಹಣಕಾಸಿನ ಹೊರೆಯಾಗದಂತೆ ಸಂಬಂಧಪಟ್ಟ ಯೋಜನೆಯ ಅನುದಾನದಲ್ಲಿಯೇ ಭರಿಸಲು ಮಂಡಳಿಯು ಸಲಹೆ ನೀಡಿತು.

(ಕ್ರಮ : ಕುಲಸಚಿವರು)

**ಐಟಂ–12** ಕೃಷಿ ವಿಜ್ಞಾನ ಕೇಂದ್ರದ ಟಿ–1 ರಿಂದ ಟಿ–9 ತಾಂತ್ರಿಕ ಸಿಬ್ಬಂದಿಯವರ ಹುದ್ದೆಗಳಿಗೆ ಮರುನಾಮಕರಣ ಮಾಡುವ ಕುರಿತು.

ಠರಾವು:

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿಯ ಕೃಷಿ ವಿಜ್ಞಾನ ಕೇಂದ್ರದ ಟಿ–1 ರಿಂದ ಟಿ–9 ತಾಂತ್ರಿಕ ಸಿಬ್ಬಂದಿಯವರ ಹುದ್ದೆಗಳಿಗೆ ಈ ಕೆಳಗಿನಂತೆ ಮರುನಾಮಕರಣ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| ಪ್ರಸ್ತುತ ಹುದ್ದೆ | ಪ್ರಸ್ತುತ ವೇತನ ಶ್ರೇಣಿ ರೂ. | ವೇತನದ ಗ್ರೇಡ್ ರೂ. | ಸಕ್ಷಮ ಪ್ರಾಧಿಕಾರವು ಅನುಮೋದಿಸಿದಂತೆ ಮರುನಾಮಕರಣಗೊಳಿಸಬೇಕಾದ ಹುದ್ದೆ |
|---|---|---|---|
| T-1 | PB-1 5200-20200 | 2000 | ಟೆಕ್ನೀಶಿಯನ್ |
| T-2 | PB-1 5200-20200 | 2400 | ಹಿರಿಯ ಟೆಕ್ನೀಶಿಯನ್ |
| T-3 | PB-1 5200-20200 | 2800 | ಟೆಕ್ನಿಕಲ್ ಸಹಾಯಕ |
| T-4 | PB-2 9300-34800 | 4200 | ಹಿರಿಯ ಟೆಕ್ನಿಕಲ್ ಸಹಾಯಕ |
| T-5 | PB-2 9300-34800 | 4600 | ಟೆಕ್ನಿಕಲ್ ಅಧಿಕಾರಿ |
| T-6 | PB-3 15600-39100 | 5400 | ಹಿರಿಯ ಟೆಕ್ನಿಕಲ್ ಅಧಿಕಾರಿ |
| T-7-8 | PB-3 15600-39100 | 6600 | ಸಹಾಯಕ ಮುಖ್ಯ ಟೆಕ್ನಿಕಲ್ ಅಧಿಕಾರಿ |
| T-9 | PB-3 15600-39100 | 7600 | ಮುಖ್ಯ ಟೆಕ್ನಿಕಲ್ ಅಧಿಕಾರಿ |

(ಕ್ರಮ : ಕುಲಸಚಿವರು)

**ಐಟಂ–13** **ಕೃಷಿ ವಿಜ್ಞಾನ ಕೇಂದ್ರದ ತಾಂತ್ರಿಕ ಸಹಾಯಕ ವೃಂದ ಮತ್ತು ಸಮಾನಂತರ ಹುದ್ದೆಗಳಿಗೆ ನೇರ ನೇಮಕಾತಿ ಮತ್ತು ಮುಂಬಡ್ತಿ ನಿಯಮಾವಳಿಗಳನ್ನು ಅಳವಡಿಸಿಕೊಳ್ಳುವ ಕುರಿತು.**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃವಿವಿ ಧಾರವಾಡದಲ್ಲಿ ಅಧಿಸೂಚನೆ ಸಂ. ಕುಸ/ವ್ಯಮಂ.–37(33)/2017–18 ದಿನಾಂಕ 19–7–2017 ರ ಅನ್ವಯ ಕೃಷಿ ವಿಜ್ಞಾನ ಕೇಂದ್ರಗಳ ತಾಂತ್ರಿಕ ಸಹಾಯಕ ವೃಂದ ಮತ್ತು ಸಮಾನಂತರ ಹುದ್ದೆಗಳಿಗೆ ನೇರ ನೇಮಕಾತಿ ಮತ್ತು ಮುಂಬಡ್ತಿ ನಿಯಮಾವಳಿಗಳನ್ನು ರೂಪಿಸಿರುವುದನ್ನು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಅಳವಡಿಸಿಕೊಂಡು, ಅದನ್ನು ರಾಯಚೂರು ಕೃವಿವಿಯಲ್ಲಿ ವಿಸ್ತರಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

**ಐಟಂ–14** **ಕೃವಿವಿ ರಾಯಚೂರಿನಲ್ಲಿ ಕಾನೂನು ಕೋಶ ಸ್ಥಾಪನೆ ಹಾಗೂ ನುರಿತ ವಕೀಲರ ನೇಮಕಾತಿಗೆ ಅನುಮೋದನೆ ಕುರಿತು**

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕಾನೂನು ಕೋಶ ಸ್ಥಾಪನೆ ಮಾಡುವ ಬದಲಾಗಿ, ಒಬ್ಬ ನುರಿತ ವಕೀಲರನ್ನು ಸಲಹೆಗಾರರನ್ನಾಗಿ ನೇಮಕಾತಿ ಮಾಡಿಕೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

| | |
|---|---|
| ಐಟಂ–15 | ಭಾರಿ ವಾಹನ ಚಾಲಕರಿಗೆ ಹೆಚ್ಚುವರಿ ಎರಡು ಮುಂಗಡ ಬಡ್ತಿ ಮಂಜೂರು ಮಾಡಲು ಅನುಮೋದನೆ ನೀಡುವ ಕುರಿತು.<br><br>ಠರಾವು:<br>ವಿಸ್ತೃತ ಚರ್ಚೆಯ ನಂತರ, ಸದರಿ ಪ್ರಸ್ತಾವನೆಯನ್ನು ನಿಯಮಾನುಸಾರವಾಗಿ ಹೆಚ್ಚಿನ ಮಾಹಿತಿಯೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ನಿರ್ಣಯಿಸಿತು. ಅಲ್ಲದೆ ಇಂತಹ ಪ್ರಕರಣಗಳು ಬೇರೆ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಅಳವಡಿಸಿಕೊಂಡಿದ್ದಲ್ಲಿ, ಅಂತಹ ಮಾಹಿತಿಯನ್ನು ಸಭೆಯ ಗಮನಕ್ಕೆ ತರಲು ಮಾನ್ಯ ಸದಸ್ಯರು ಸಲಹೆ ನೀಡಿದರು.<br>(ಕ್ರಮ : ಕುಲಸಚಿವರು) |
| ಐಟಂ–16 | ಅಧಿಕಾರಿ, ಪ್ರಾಧ್ಯಾಪಕ, ಸಹ–ಪ್ರಾಧ್ಯಾಪಕ, ಸಹಾಯಕ ಪ್ರಾಧ್ಯಾಪಕರ ಹಾಗೂ ಶಿಕ್ಷಕೇತರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮೋದನೆ ಕುರಿತು.<br><br>ಠರಾವು:<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಸ್ಥಳೀಯ ವೃಂದದ ಅಧಿಕಾರಿಗಳ 08 ಹುದ್ದೆಗಳು, ಪ್ರಾಧ್ಯಾಪಕರ 28 ಹುದ್ದೆಗಳು, ಸಹ–ಪ್ರಾಧ್ಯಾಪಕರ 45 ಹುದ್ದೆಗಳನ್ನು ಹಾಗೂ ಸ್ಥಳೀಯ ವೃಂದದಲ್ಲಿ ಪ್ರಸ್ತುತ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಮತ್ತು ಗ್ರೂಪ್–ಬಿ ಮತ್ತು ಗ್ರೂಪ್–ಸಿ ಅಡಿ ಬರುವ ಶಿಕ್ಷಕೇತರರ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>ಮುಂದುವರೆದು, ಸ್ಥಳೀಯೇತರ ವೃಂದದಲ್ಲಿ ಪ್ರಸ್ತುತ ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಿಕೊಳ್ಳಲು ಉದ್ದೇಶಿಸಿದ್ದಲ್ಲಿ, ಪ್ರಾಧ್ಯಾಪಕರ, ಸಹ–ಪ್ರಾಧ್ಯಾಪಕರ, ಸಹಾಯಕ ಪ್ರಾಧ್ಯಾಪಕರ ಹಾಗೂ ಗ್ರೂಪ್–ಬಿ ಮತ್ತು ಗ್ರೂಪ್–ಸಿ ಅಡಿ ಬರುವ ಶಿಕ್ಷಕೇತರರ ಹುದ್ದೆಗಳ ವಿವರಗಳನ್ನು ಸಿದ್ಧಪಡಿಸಿ ಕಡ್ಡಾಯವಾಗಿ ಆರ್ಥಿಕ ಇಲಾಖೆ ಅನುಮೋದನೆಯನ್ನು ಪಡೆದು ವಿಶ್ವವಿದ್ಯಾಲಯದ ನಿಯಮಾವಳಿಗಳನುಸಾರ ಭರ್ತಿ ಮಾಡಿಕೊಳ್ಳಲು ಮಂಡಳಿಯು ಅನುಮೋದನೆ ನೀಡಿತು. ಅಲ್ಲದೆ, ಸ್ಥಳೀಯೇತರ ವೃಂದದಲ್ಲಿಯ ಹುದ್ದೆಗಳಿಗೆ ಆರ್ಥಿಕ ಇಲಾಖೆಯ ಸಹಮತಿ ಪಡೆದುಕೊಳ್ಳಬೇಕಾಗಿರುತ್ತದೆ ಎಂದು ಆರ್ಥಿಕ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗಳು ಸಲಹೆ ನೀಡಿದರು.<br>(ಕ್ರಮ : ಕುಲಸಚಿವರು) |
| ಐಟಂ–17 | **ಡಾ. ಜಿ.ಎಸ್. ಯಡಹಳ್ಳಿ, ಸಹಾಯಕ ಪ್ರಾಧ್ಯಾಪಕರು (ಬೇಸಾಯ ಶಾಸ್ತ್ರ) ಮತ್ತು ಮುಖ್ಯಸ್ಥರು, ಕೃಷಿ ವಿಜ್ಞಾನ ಕೇಂದ್ರ, ರಾಯಚೂರು ಕೃವಿವಿ ರಾಯಚೂರು, ಹಾಗೂ ಡಾ. ದಿನೇಶ್‌ಕುಮಾರ್ ಎಸ್.ಪಿ, ಸಹಾಯಕ ಪ್ರಾಧ್ಯಾಪಕರು (ಬೇಸಾಯ ಶಾಸ್ತ್ರ), ಕೃಷಿ ವಿಜ್ಞಾನ ಕೇಂದ್ರ, ಬಾಗಲಕೋಟೆ, ಕೃವಿವಿ, ಧಾರವಾಡ ಇವರ ಪರಸ್ಪರ ವರ್ಗಾವಣೆಗೆ ಅನುಮೋದನೆ ಕುರಿತು.**<br><br>**ಠರಾವು:**<br>ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಕಾಯ್ದೆ–2009 ರಲ್ಲಿ ಪರಸ್ಪರ ವರ್ಗಾವಣೆಗೆ ಅವಕಾಶವಿಲ್ಲದ ಕಾರಣ ಸದರಿ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿರುವುದಿಲ್ಲ. ಮುಂದುವರೆದು, ಇನ್ನು ಮುಂದೆ ಕೃವಿವಿ ಕಾಯ್ದೆಯಲ್ಲಿ ಕಲ್ಪಿಸಲಾದ ಅವಕಾಶಗಳನ್ವಯ ಮಾತ್ರ ಪ್ರಸ್ತಾವನೆಗಳನ್ನು ಮಂಡಳಿಯ ಸಭೆಯ ಮುಂದೆ ಮಂಡಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸಲಹೆ ನೀಡಿತು.<br>(ಕ್ರಮ : ಆಡಳಿತಾಧಿಕಾರಿಗಳು) |
| ಐಟಂ–18 | ಕೃವಿವಿ., ಸಿಬ್ಬಂದಿಯವರ ರೂ. 1,00,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.<br><br>ಠರಾವು :<br>ಮಾನ್ಯತೆ ಹೊಂದಿದ ಆಸ್ಪತ್ರೆಗಳಲ್ಲಿ ಈ ಕೆಳಕಂಡ ಸಿಬ್ಬಂದಿಯವರು ಪಡೆದ ಚಿಕಿತ್ಸೆಯ ರೂ. 25,000/–ಕ್ಕಿಂತ |

ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಠರಾಯಿಸಿತು :

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ಸಿ. ಯು. ಕೊಟಬಾಗಿ,<br>ಸಹಾಯಕ ಹಣಕಾಸು ನಿಯಂತ್ರಣಾಧಿಕಾರಿ,<br>ಕುಲಸಚಿವರು ಕಛೇರಿ, ಕೃವಿವಿ, ರಾಯಚೂರು. | 88,806.00 |
| 2 | ಶ್ರೀ. ಶರಣಪ್ಪ ಹೆಚ್<br>ಹಿರಿಯ ಟ್ರ್ಯಾಕ್ಟರ್ ಚಾಲಕ, ಕೃತಾಂಮ, ರಾಯಚೂರು. | 1,75,106.00 |
| 3 | ಶ್ರೀ. ಸಿ. ಯು. ಕೊಟಬಾಗಿ,<br>ಸಹಾಯಕರು ಹಣಕಾಸು ನಿಯಂತ್ರಣಾಧಿಕಾರಿಗಳು,<br>ಕುಲಸಚಿವರು ಕಛೇರಿ, ಕೃವಿವಿ, ರಾಯಚೂರು. | 3,11,990.00 |

ಮುಂದುವರೆದು, ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ಈ ಕೆಳಕಂಡ ಸಿಬ್ಬಂದಿಯವರು ಪಡೆದ ತುರ್ತು ಚಿಕಿತ್ಸೆಯ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಯನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿ, ಡಿ.ಹೆಚ್.ಓ.ರವರ ಮೇಲುರುಜುಗಾಗಿ ಕಳುಹಿಸಲು ಮತ್ತು ಮೇಲುರುಜುಗೊಂಡ ಮೊತ್ತದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಠರಾಯಿಸಿತು :

| ಕ್ರ. ಸಂ. | ಸಿಬ್ಬಂದಿಯವರ ವಿವರ | ವೈದ್ಯಕೀಯ ವೆಚ್ಚ ಮರು – ಪಾವತಿಸಬೇಕಾದ ಮೊತ್ತ (ರೂ.) |
|---|---|---|
| 1 | ಶ್ರೀ. ರಾಮಕೃಷ್ಣ ಡಿ. ಶಿರವಾಳ<br>ಸಹಾಯಕ ಕುಲಸಚಿವರು,<br>ಆಡಳಿತಾಧಿಕಾರಿಗಳವರ ಕಛೇರಿ,ಕೃವಿ.ವಿ .ರಾಯಚೂರು | 60,501.00 |
| 2 | ದಿ.ರವೀಂದ್ರ ಯರ್ನಾಳ<br>ಸಹಾಯಕ ಪ್ರಾಧ್ಯಾಪಕರು,<br>ಡೀನ್ ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು. | 4,90,070.00 |
| 3 | ಶ್ರೀಮತಿ ಮಿರ್ಜಾ ಇಪ್ತೇಖಾರ್ ಉಲ್ಲಾ ಬೇಗ್<br>ಹಿರಿಯ ಸಹಾಯಕರು<br>ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು. | 49,736.00 |
| 4 | ಶ್ರೀ ಶರಣಗೌಡ<br>ಸಹಾಯಕರು ಪ್ರಾಧ್ಯಾಪಕರು,<br>ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚೂರು. | 49,225.00 |
| 5 | ಶ್ರೀ ಎನ್. ಮಲ್ಲಿಕಾರ್ಜುನ<br>ಹಿರಿಯ ಕೃಷಿ ಕಾರ್ಮಿಕ<br>ಕೃಷಿ ಮಹಾವಿದ್ಯಾಲಯ, ರಾಯಚುರು | 58,246.00 |
| 6 | ಶ್ರೀ. ಜಂಗಮರೆಡ್ಡಿ,<br>ಭಾರಿವಾಹನ ಚಾಲಕರು,<br>ಕೃಷಿ ಸಂಶೋಧನಾ ಕೇಂದ್ರ ಸಿರುಗುಪ್ಪ. | 2,57,171.00 |
| 7 | ದಿ. ಡಾ॥ ಮಲ್ಲೇಶ್, ಎಸ್. ಬಿ.,<br>ಸಹಾಯಕ ಪ್ರಾದ್ಯಾಪಕರು,<br>ಕೃಷಿ ಸಂಶೊಧನಾ ಕೇಂದ್ರ ಹಗರಿ. | 19,495.00 |
| 8 | ಶ್ರೀಮತಿ ಮಂಜುಳಾ ಕೆ. ಎಸ್<br>ಆಪ್ತ ಕಾರ್ಯದರ್ಶಿ<br>ಕೃಷಿ ಮಹಾವಿದ್ಯಾಲಯ ರಾಯಚೂರು. | 1,96,051.00 |

| | | |
|---|---|---|
| 9 | ಶ್ರೀಮತಿ ಸರಸ್ವತಿ ಶಿವಮೂರ್ತಿ,<br>ಕೃಷಿ ಕಾರ್ಮಿಕಳು<br>ಕೃಷಿ ಸಂಶೋಧನಾ ಕೇಂದ್ರ ಗಂಗಾವತಿ. | 1,60,790.00 |
| 10 | ಶ್ರೀ ಶರಣಪ್ಪ<br>ಬೆರಳಚ್ಚುಗಾರರ ಕಂಪ್ಯೂಟರ್ ಆಪರೇಟರ್,<br>ಕೃಷಿ ತಾಂತ್ರಿಕ ಮಹಾವಿದ್ಯಾಲಯ ರಾಯಚುರು. | 8,585.00 |
| 11 | ಡಾ|| ಬಸವರಾಜ ಎಸ್. ಕಲ್ಮಠ<br>ಸಹಾಯಕ ಪ್ರಾಧ್ಯಾಪಕರು,<br>ಡೀನ್ ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ | 11,886.00 |
| 12 | ಡಾ|| ರವಿ ಪೂಜಾರಿ,<br>ಸಹಾಯಕ ಪ್ರಾಧ್ಯಾಪಕರು,<br>ಡೀನ್ ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿ | 45,842.00 |

(ಕ್ರಮ: ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿಗಳು))

**ಐಟಂ–19** ಬೀಜ ಘಟಕ, ಕೃವಿವಿ., ರಾಯಚೂರಿನಲ್ಲಿ 2019–20ನೇ ಸಾಲಿನ ವಿವಿಧ ಬೀಜೋತ್ಪಾದನಾ ಕಾರ್ಯಕ್ರಮಗಳಿಗೆ ಬೇಕಾಗುವ ಹಣಕಾಸಿನ ಅನುಮೋದನೆ ಕುರಿತು.

**ಠರಾವು:**

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಮುಖ್ಯ ಆವರಣದ ಬೀಜ ಘಟಕದಲ್ಲಿ 2019–20 ನೇ ಸಾಲಿನಲ್ಲಿ ವಿವಿಧ ಬೆಳೆಗಳ ಬೀಜೋತ್ಪಾದನಾ ಕಾರ್ಯಕ್ರಮಗಳನ್ನು ರೈತರ ಸಹಭಾಗಿತ್ವ ಯೋಜನೆಯಡಿ ಅನುಷ್ಠಾನಗೊಳಿಸಲು ತಗಲುವ ವೆಚ್ಚದ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| ಕ್ರ ಸಂ | ಹಣಕಾಸಿನ ಮೂಲ | ಪ್ರಮಾಣ (ಕ್ವಿಂ) | ಮೊತ್ತ (ರೂ. ಲಕ್ಷಗಳಲ್ಲಿ) | ಆವರ್ತನಿಧಿ / ಎ.ಬಿ./ಎ.ಸಿ. ಸಂಖ್ಯೆ. |
|---|---|---|---|---|
| 1. | ಬೀಜ ಆವರ್ತನಿಧಿ,<br>ಬೀಜ ಘಟಕ, ಕೃವಿವಿ,<br>ರಾಯಚೂರು | 4087 | 306.00 | ಎ.ಬಿ./ಎ.ಸಿ.–8637 |
| 2. | ಬೀಜ ಕೇಂದ್ರ ಯೋಜನೆ<br>(ಬೇಳೆಕಾಳು)<br>ಬೀಜ ಘಟಕ, ಕೃವಿವಿ,<br>ರಾಯಚೂರು | 1650 | 121.00 | ಎ.ಬಿ./ಎ.ಸಿ.–8621 |
| 3. | ಬೀಜ ಕೇಂದ್ರ ಯೋಜನೆ<br>(ಸೋಯಾಬೀನ್)<br>ಬೀಜ ಘಟಕ, ಕೃವಿವಿ,<br>ರಾಯಚೂರು | 2150 | 106.00 | ಎ.ಬಿ./ಎ.ಸಿ.–8635 |
| | ಒಟ್ಟು : | 7887 | 533.00 | |

ಮುಂದುವರೆದು, ಸದರಿ ಮೊತ್ತವು ಆಯಾ ಆವರ್ತನಿಧಿಗಳಲ್ಲಿ ಅನುದಾನದ ಹಂಚಿಕೆ ಮಾಡಿಕೊಂಡಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ಹಾಗೂ ಮುಂದಿನ ದಿನಗಳಲ್ಲಿ ರೈತರ ಸಹಭಾಗಿತ್ವ ಯೋಜನೆಯಡಿ ಪ್ರಸ್ತಾವನೆಯನ್ನು ಮುಂಚಿತವಾಗಿ ಸಲ್ಲಿಸಿ ಅನುಷ್ಠಾನಗೊಳಿಸಲು ಮಾನ್ಯ ಸದಸ್ಯರುಗಳು ಸಲಹೆ ನೀಡಿದರು.

(ಕ್ರಮ : ವಿಶೇಷಾಧಿಕಾರಿಗಳು(ಬೀಜ)

**ಐಟಂ–20**

ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.

ಠರಾವು:

ರೂ. 10.00 ಲಕ್ಷ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಅಭಿವೃದ್ಧಿ ದೃಷ್ಟಿಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ಮುಖ್ಯ ಆವರಣದಲ್ಲಿ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು :

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ. ಲಕ್ಷಗಳಲ್ಲಿ) | ಅನುದಾನ ವಿವರ |
|---|---|---|---|
| | ಕೃವಿ.ವಿ. ರಾಯಚೂರು ಆವರಣ | | |
| 1 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಗ್ರಂಥಾಲಯದ ಮೊದಲನೇ ಮಹಡಿಯ ಉಳಿದ ಭಾಗದ ನಿರ್ಮಾಣ ಕೆಲಸ. (ಪ್ಲಿಂಥ್ ಏರಿಯಾ 948 ಚ.ಮೀ.) | 178.50 | ಕೃ ವಿ. ವಿ. ಅನುದಾನ |
| 2 | ಕೃವಿವಿ, ರಾಯಚೂರು ಆವರಣದಲ್ಲಿ ಸಿಬ್ಬಂದಿ ವಸತಿ ಸಮುಚ್ಚಯದ ಹತ್ತಿರ ಬಯಲು ರಂಗಮಂದಿರ ನಿರ್ಮಿಸುವ ಕೆಲಸ. (108 ಚ.ಮೀ.) | 20.00 | ಕೃ ವಿ. ವಿ. ಅನುದಾನ |
| 3 | ಕೃವಿವಿ, ರಾಯಚೂರು ಆವರಣದಲ್ಲಿ ವಸತಿ ಗೃಹಗಳ ಹತ್ತಿರ ಇರುವ ಉದ್ಯಾನವನಕ್ಕೆ ತಂತಿ ಬೇಲಿ ಅಳವಡಿಸುವ ಕೆಲಸ. (ಉದ್ದ 247 ಮೀ.) | 14.32 | ಕೃ ವಿ. ವಿ. ಅನುದಾನ |

(ಕ್ರಮ : ಆಸ್ತಿ ಅಧಿಕಾರಿ)

**ಐಟಂ–21**

ಹತ್ತು ಲಕ್ಷ ರೂಪಾಯಿಗಳ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.

ಠರಾವು:

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ರೂ. 10.00 ಲಕ್ಷ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣವನ್ನು ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

| Sl. No. | Name of the item | Qty. | Amount (Rs. in lakh) |
|---|---|---|---|
| 1. | GIS Software | 01 Set | 15.00 |
| 2. | Seed processing plant along with accessories 4 tonne /hour capacity including Installation | 01 Set | 27.09 |
| 3. | Seed processing plant along with accessories 2 tonne / hour capacity including Installation | 01 Set | 20.00 |
| 4. | Raman Spectroscopy | 01 | 95.00 |
| 5. | Tunnel Electron Microscopy | 01 | 98.00 |

(ಕ್ರಮ : ಸರಕು ಖರೀದಿ ಅಧಿಕಾರಿಗಳು)

**ಐಟಂ–22**

ಏಕೈಕ ಮೂಲದಿಂದ ಲಭ್ಯವಿರುವ ವೈಜ್ಞಾನಿಕ ಉಪಕರಣಗಳನ್ನು ಖರೀದಿಸಲು ಅನುಮೋದನೆಗಾಗಿ ಸಲ್ಲಿಸಲಾಗಿದೆ.

ಠರಾವು:

ವಿಸ್ತೃತ ಚರ್ಚೆಯ ನಂತರ, ಏಕೈಕ ಮೂಲದಿಂದ ಲಭ್ಯವಿರುವ ವೈಜ್ಞಾನಿಕ ಉಪಕರಣಗಳನ್ನು ನೇರವಾಗಿ ಏಕೈಕ ಸರಬರಾಜುದಾರರಿಂದ ಪ್ರಸ್ತಾವನೆಯಲ್ಲಿ ತಿಳಿಸಿರುವ ಹಾಗೆ ಖರೀದಿಸಲು ಮಾನ್ಯ ವ್ಯವಸ್ಥಾಪನಾ

ಮಂಡಳಿಯು ಅನುಮೋದನೆ ನೀಡಿತು.

| Sl. No. | Name of the item | Qty. | Amount (Rs. in lakh) |
|---|---|---|---|
| 1. | Wmicro tracker arena | 01 | 18.06 |
| 2. | Tethering flight mill equipment | 01 | 7.00 |
| 3. | Electro antenograph system | 01 Set | 33.00 |
| 4. | Turbo Vap LV evaporation system | 01 Set | 9.00 |

(ಕ್ರಮ : ಸರಕು ಖರೀದಿ ಅಧಿಕಾರಿಗಳು)

**ಐಟಂ–23** ಜೆ.ಎಸ್–120 ಬದಲಿಗೆ ಜೆ.ಸಿ.ಬಿ. 3ಡಿಎಕ್ಸ್ ಮಾದರಿ ಖರೀದಿಗೆ ಅನುಮೋದನೆ ನೀಡುವ ಕುರಿತು.

ಠರಾವು:

ವಿಸ್ತೃತ ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ಕೃಷಿ ಚಟುವಟಿಕೆಗಳ ಉಪಯೋಗಕ್ಕಾಗಿ ಜೆ.ಎಸ್–120 ಬದಲಿಗೆ ಜೆ.ಸಿ.ಬಿ. 3ಡಿಎಕ್ಸ್ ಮಾದರಿ ಅನ್ನು ಟೆಂಡರ್/ಜೆಮ್ ಮುಖಾಂತರ ಕೆ.ಟಿ.ಪಿ.ಪಿ. ನಿಯಮಾನುಸಾರವಾಗಿ ಖರೀದಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಸರಕು ಖರೀದಿ ಅಧಿಕಾರಿಗಳು)

**ಐಟಂ–24** ರಾಜ್ಯದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಪ್ರಸ್ತಾಪಿತ ಏಕರೂಪದ ಪರಿನಿಯಮಗಳಿಗೆ ಅನುಮೋದನೆ ಕುರಿತು

ಠರಾವು:

ವಿಸ್ತೃತ ಚರ್ಚೆಯ ನಂತರ, ರಾಜ್ಯದ ಎಲ್ಲಾ ನಾಲ್ಕು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಂತಿಮಗೊಳಿಸಲಾದ ಪ್ರಸ್ತಾಪಿತ ಏಕರೂಪದ ಪರಿನಿಯಮಗಳಿಗೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಒಪ್ಪಿಗೆ ಸೂಚಿಸಿ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

**ಐಟಂ–25** ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು

**1** ಹೊಸದಾಗಿ ನಾಲವಾರ ಮತ್ತು ದೇವದುರ್ಗದಲ್ಲಿ ಸ್ಥಾಪಿಸಲಾದ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರಗಳಿಗೆ ಹೊಸ ಕಟ್ಟಡ ನಿರ್ಮಿಸುವ ಕುರಿತು.

ಠರಾವು:

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ವ್ಯಾಪ್ತಿಯಲ್ಲಿಯ ನಾಲವಾರ ಮತ್ತು ದೇವದುರ್ಗದಲ್ಲಿ ಹೊಸದಾಗಿ ಕೃಷಿ ವಿಸ್ತರಣಾ ಶಿಕ್ಷಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಸದರಿ ಸ್ಥಳಗಳಲ್ಲಿ ಅವಶ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಹಾಗು ಕಟ್ಟಡಗಳನ್ನು ನಿರ್ಮಿಸಲು ವಿನ್ಯಾಸ, ವಿವರಣಾ ಪಟ್ಟಿ ಹಾಗೂ ಅದಕ್ಕೆ ತಗಲುವ ವೆಚ್ಚ ರೂ. 5.00 ಕೋಟಿಗಳ (ಪ್ರತಿ ಕೇಂದ್ರಕ್ಕೆ) ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ವಿಸ್ತರಣಾ ನಿರ್ದೇಶಕರು/ಆಸ್ತಿ ಅಧಿಕಾರಿಗಳು)

**2** ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರ ಇಸ್ರೇಲ್ ದೇಶದ ಪ್ರವಾಸದ ಕುರಿತು.

ಠರಾವು:

ಚರ್ಚೆಯ ನಂತರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಸದಸ್ಯರು ಇಸ್ರೇಲ್ ದೇಶದ ಪ್ರವಾಸವನ್ನು ಕೈಗೊಳ್ಳಲು ಮಂಡಳಿಯು ತೀರ್ಮಾನಿಸಿತು. ಮುಂದುವರೆದು, ಸದರಿ ಪ್ರವಾಸಕ್ಕೆ ತಗಲುವ ವೆಚ್ಚವನ್ನು ವಿಶ್ವವಿದ್ಯಾಲಯದ ಆಂತರಿಕ ಮೂಲದಿಂದ ಭರಿಸಲು ಹಾಗೂ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಕುಲಸಚಿವರು)

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| ಸಹಿ /– 12–12–2019 | ಸಹಿ /– 12–12–2019 |
|---|---|
| (ಕೆ.ಎನ್. ಕಟ್ಟಿಮನಿ)<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | (ಎಂ.ಜಿ. ಪಾಟೀಲ)<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಎಂ.ಜಿ. ಪಾಟೀಲ)
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.